**ಮೂರನೇ ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ರವರ**
**ನ್ಯಾಯಾಲಯ, ಕನಕಪುರ**

**<u>ಸಿ.ಸಿ ನಂ. 63/2013</u>**

ದಿನಾಂಕಃ**. 23.02.2026.** ರಂದು ಸಾಕ್ಷಿಗೆ ಮದ್ಯಾಹ್ನ **1.10** ಗಂಟೆಗೆ ಪ್ರಮಾಣ ವಚನ ಭೋದಿಸಲಾಯಿತು.

| ಚಾಸಾ-**4** | ಪ್ರಾಸಾ-**4** |
|---|---|
| ಹೆಸರು | - ಜಯರಾಮ ನಾಯ್ಕ |
| ತಂದೆ ಹೆಸರು | - ಲೇಟ್ ಗೋವಿಂದನಾಯ್ಕ |
| ವಯಸ್ಸು | - **45** |
| ಉದ್ಯೋಗ | - ವರದಿಗಾರರು |
| ವಿಳಾಸ | - ಚೌಕಸಂದ್ರ |

**<u>ಮುಖ್ಯವಿಚಾರಣೆ : ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರಿಂದಃ-</u>**

ದಿನಾಂಕಃ **16.01.2012** ರಂದು ಸಂಜೆ **5** ಗಂಟೆ ಸುಮಾರಿಗೆ ಕನಕಪುರದ ಟ್ಯಾಂಕ್ ರಸ್ತೆಯಲ್ಲಿ ಪತ್ರ ಕರ್ತರಾದ ರಾಮಚಂದ್ರರವರ ಮನೆಗೆ ನಾನು ಕೆಲಸದ ನಿಮಿತ್ತ ಮಾತನಾಡಲು ಅವರ ಮನೆಗೆ ಹೋದಾಗ ಪೋಲಿಸರು ಚಾ.ಸಾ. **1** ಶೃತಿ, ಆರೋಪಿತರಾದ ವೆಂಕಟೇಶ್ ಮತ್ತು ವೀಣಾ ರವರ ನಡುವೆ ಆದ ಗಲಾಟೆಯ ವಿಚಾರವಾಗಿ ಪಂಚನಾಮೆ ಮಾಡುತ್ತಿದ್ದು ಸಹಕರಿಸಿ ಎಂದು ಕೇಳಿಕೊಂಡಾಗ ಅದಕ್ಕೆ ನಾನು ಒಪ್ಪಿಕೊಂಡಾಗ ನನ್ನ ಹಾಗೂ ಚಾ.ಸಾ. **1** ಶೃತಿ, ಚಾ.ಸಾ. **2** , ಚಾ.ಸಾ. **3** ಮತ್ತು ಪೋಲಿಸರು ನಮ್ಮ ಸಮಕ್ಷಮ ಪಂಚನಾಮೆ ಮಾಡಿ ಒಂದು ಮುರಿದು ಹೋಗಿದ್ದ ವಿಡಿಯೋಕಾನ್ ರಿಮೋಟ್ ಅನ್ನು ಸಂಜೆ **4.30** ಗಂಟೆಯಿಂದ **5.30** ಗಂಟೆವರೆಗೆ ಪಂಚನಾಮೆ ಮಾಡಿ ವಶಪಡಿಸಿಕೊಂಡರು.

ಸಾಕ್ಷಿ ನ್ಯಾಯಾಲಯದ ಮುಂದೆ ಇರುವ ಒಂದು ವಿಡಿಯೋಕಾನ್ ರಿಮೋಟ್ ಅನ್ನು ನೋಡಿ ಸದರಿ ರಿಮೋಟ್ ಎಂದು ಗುರುತಿಸಿದ್ದು ಅದನ್ನು ಈಗಾಗಲೇ ಎಂ.ಓ **1** ಎಂದು ಗುರುತಿಸಲಾಗಿದೆ.

ಸಾಕ್ಷಿ ಒಂದು ಪಂಚನಾಮೆಯನ್ನು ನೋಡಿ ಅದರಲ್ಲಿರುವ ಒಂದು ಸಹಿಯನ್ನು ನೋಡಿ ತನ್ನ ಸಹಿ ಮತ್ತು ಪಂಚನಾಮೆ ಎಂದು ಗುರುತಿಸಿದ್ದು, ಸದರಿ **ಪಂಚನಾಮೆಯನ್ನು** ಈಗಾಗಲೇ ನಿಪಿ-2 ಎಂದು, ಸಾಕ್ಷಿ ಸಹಿಯನ್ನು ನಿಪಿ-2(ಬಿ) ಎಂದು ಗುರುತಿಸಲಾಯಿತು.

**ಪಾಟೀ ಸವಾಲು: ಆರೋಪಿತರ ಪರ ಶ್ರೀ. ಎಸ್. ಪಿ.ಕೆ ವಕೀಲರಿಂದಃ**

ಪಂಚನಾಮೆ ಮಾಡಲು ಪೋಲಿಸ್ ಪೇದೆ ಬಂದಿದ್ದರು. ಅವರ ಹೆಸರು ಗೊತ್ತಿಲ್ಲ. ಪಂಚನಾಮೆಗೆ ಬರಲು ಪೋಲಿಸರು ನನಗೆ ಲಿಖಿತ ನೋಟಿಸ್ ಕೊಟ್ಟಿಲ್ಲ. ನಾನು ಮತ್ತು ಚಾ.ಸಾ. 2 ರವರು ಸ್ನೇಹಿತರು ಎಂದರೆ ಸರಿ. ನಿ.ಫಿ2 ಪಂಚನಾಮೆ ಯಲ್ಲಿ ಏನು ಬರೆದಿದೆ ಪೋಲಿಸರು ನನಗೆ ಓದಿ ಹೇಳಿದ್ದಾರೆ. ಪಂಚನಾಮೆ ಮಾಡಿದ ಸ್ಥಳದ ಚಕ್ಕುಬಂದಿ ಗೊತ್ತು, ಉತ್ತರ ದಿಕ್ಕಿಗೆ ಮನೆ ಬಾಗಿಲು, ದಕ್ಷಿಣ ದಿಕ್ಕಿಗೆ ಮನೆ, ಪೂರ್ವಕ್ಕೆ ಗೋಡೆ ಮತ್ತು ಪಶ್ಚಿಮಕ್ಕೆ ರಸ್ತೆ. ಎಂ.ಓ 1 ಅನ್ನು ವಶಪಡಿಸಿಕೊಂಡಾಗ ಅದಕ್ಕೆ ಟೇಪ್ ಹಚ್ಚಿರಲಿಲ್ಲ. ಎಂ.ಓ 1 ಆ ರಿಮೋಟ್ ಅಲ್ಲ ಎಂದರೆ ಸರಿಯಲ್ಲ. ರಿಮೋಟ್ 2 ತುಂಡಾಗಿತ್ತು. ಪೋಲಿಸರು ನನ್ನ ಸಮಕ್ಷಮ ಎಂ.ಓ 1 ಅನ್ನು ವಶಪಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಘಟನಾ ಸ್ಥಳದಲ್ಲಿ ಪೋಲಿಸರು ನಾನು ಹೇಳಿದ ದಿನದಂದು ನನ್ನ ಸಮಕ್ಷಮ ಪಂಚನಾಮೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಪೋಲಿಸ್ ಠಾಣೆಯಲ್ಲಿ ಪಂಚನಾಮೆಗೆ ಸಹಿ ಹಾಕಿದ್ದೇನೆ ಎಂದರೆ ಸರಿಯಲ್ಲ. ಚಾ.ಸಾ. 2 ನನ್ನ ಸ್ನೇಹಿತನಾಗಿರುವುದರಿಂದ ಅವರ ಮಾತುಕೇಳಿ ಕೊಂಡು ನಿ,ಪಿ.2 ಕ್ಕೆ ಪೂರಕವಾಗಿ ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಏನೂ ಗೊತ್ತಿಲ್ಲದಿದ್ದರೂ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ಸಾಕ್ಷಿಯ ವಿಚಾರಣೆಯನ್ನು ನಾನು ತೆರೆದ ನ್ಯಾಯಾಲಯದಲ್ಲಿ ಮದ್ಯಾಹ್ನ **1.25** ಗಂಟೆಯವರೆಗೆ ಪಡೆದುಕೊಂಡಿರುತ್ತೇನೆ ಎಂದು ಧೃಢೀಕರಿಸುತ್ತೇನೆ)

ಓದಿ ಹೇಳಿ ಕೇಳಿ ಸರಿ ಇದೆ,

**ಮೂರನೇ ಅಪರ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆಎಂಎಫ್ ಸಿ., ಕನಕಪುರ.**